Regd No. M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 131] ಗುರುವಾರ 23—1—47 [ಬಿಡಿ ಪ್ರತಿ 3 ಪೈ

ಖಿಲಾಫತ್ - ಪಾಕಿಸ್ತಾನ್

ಸ್ಕೀಂ

[ಮುಂದುವರಿದುದು]

ಹಿಂದೂಗಳ ಗತಿ ಏನಾಗಲು ?

ಬಂಗಾಳ ಪಂಜಾಬುಗಳೊಂದಿಗೆ ಪಾಕಿಸ್ತಾನ್ ಸಮಸ್ಯೆಯು ಕೊನೆಗಾಣುವಿಲ್ಲ. ಅನಂತವಾಗಿ ಅದು ವಿಜೃಂಭಿಸುತ್ತಲೇ ಇರುತ್ತದೆ. ಮತವನ್ನು ರಾಜಕೀಯದೊಂದಿಗೆ ಕಲಿಸಕೂಡದೆಂಬ ಸಿದ್ಧಾಂತವನ್ನು ನಾವು ಹೃದಯ ಪೂರ್ವಕವಾಗಿ ಅಂಗೀಕರಿಸುತ್ತೇವೆ

ಆದರೆ ಒಂದು ಮತದವರು ಈ ಬಗೆಯಲ್ಲಿ ಇನ್ನೊಂದು ಮತಸ್ಥರ ವಿಷಯದಲ್ಲಿ ಇಂಥಾ ದುರಭಿಪ್ರಾಯಗಳೊಂದಿಗೆ ದೂಷಿಸುತ್ತಾ ಮತ ವಿಸ್ಮೃತವನ್ನು ತಂದಿಡುತ್ತಾ, ಅವರಿಗೆ ಓಟಿನ ಹಕ್ಕು ಕೂಡ ಇಲ್ಲವೆಂದು ವಾದಿಸುತ್ತಿರುವಾಗ ಮತಸ್ಥರಿಗಾಗಿ ದೆಹಲಿಯ ಶಾಸನಸಭೆಯಲ್ಲಿ ಕೊಡಲ್ಪಟ್ಟಿರುವ 500 ಸ್ಥಾನಗಳಲ್ಲಿ 450 ಸ್ಥಾನಗಳನ್ನು ಕಬ್ಜಮಾಡಿ, ತಮ್ಮ ಮಾತಿಗೆ ವಿರೋಧ ಬಂದಾಗಲೆಲ್ಲಾ ನಾದಿರ್‌ಷಾ ಪದ್ಧತಿಗಳನ್ನವಲಂಬಿಸಿ ಅಲ್ಲಿ ಅಲ್ಲೋಲ ಕಲ್ಲೋಲಗಳನ್ನು ಮಾಡುತ್ತಿರುವಾಗ ಖಲಿಫರ್, ಅಹಮದಾಬಾದುಗಳಲ್ಲಿ ಹಿಂದೂಗಳಿಗೆ ರಕ್ಷಣೆಗಳನ್ನು ಕೊಡಲಾರದೆ ಹೋದರು.

ಫಲಪ್ರದಾನಗಳನ್ನು ಕಟ್ಟಿಡಬೇಕೆ

ಹಿಂದೂಗಳು ಔದಾರ್ಯವನ್ನು ತೋರಿಸಿದಂತೆಲ್ಲಾ ಮುಸ್ಲಿಂರು ಒಂದು ಗುನಿಸ ಪ್ರಕಾರ ಅವರ ಮೇಲೆ ಸವಾರಿಯನ್ನು ಮಾಡುತ್ತಿದ್ದಾರೆ. ಏಟಿಗೆ ಎದಿರು ಹೊಡೆಯಲು ಆಗದಿದ್ದರೂ, ಅತ್ಮರಕ್ಷಣೆಯು ನಿಮಿತ್ತವಾಗಿಯಾದರೂ ತಕ್ಕ ಬಂದೋಬಸ್ತನ್ನು ಮಾಡಿಕೊಳ್ಳಬೇಕು. 50 ವರ್ಷಗಳ ಕಾಲ ನೋಡಿದ ಸೌಕರ್ಯಗಳು. ಅನುಕೂಲಗಳು. ಪ್ರದಾನಗಳು ಅವರಿಗೆ ಎರಡಾಣೆಯಾದರೂ ತೃಪ್ತಿಯನ್ನುಂಟು ಮಾಡುವುದಿಲ್ಲ.

ಅವರಿಗೆ ಖಿಲಾಫತ್ತು ಕೊಟ್ಟೆವು. ಆದ್ದು ಕೇಳಿರೆಂದು ಅಭಯವನ್ನಿತ್ತ ಪದವಿಗಳಲ್ಲಿ ಅವರು ಕೋರಿದ ಅನುಕೂಲವನ್ನು ಕೊಟ್ಟೆವು. ಫಲಪ್ರದಾನಗಳನ್ನು ಕೊಡುತ್ತಾ, ಅವರ ಒಳಿಗಿನ ಆಶೆ ಹೆಚ್ಚುತ್ತಿದೆ ಹಿಂದೂ

ವಿದ್ಯಾರ್ಥಿಗಳಿಗೆ ಸಾರಾಯಿ ಇಲ್ಲ

ಜನವರಿ 9 ನೇ ತಾರೀಖಿನಿಂದ ವಿದ್ಯಾರ್ಥಿಗಳಿಗೆ ಸಾರಾಯಿಯನ್ನು (ಸ್ವದೇಶಿಯಾಗಲೀ, ವಿದೇಶಿಯಾಗಲಿ) ಮಾರಕೂಡದೆಂದು ಪಂಜಾಬು ಸರಕಾರವು ಆರ್ಡರು ಮಾಡಿದೆ.

ತಾಂಬ್ರ ಶಾಸನ ಪ್ರದರ್ಶನ

ಮದರಾಸು ಗೌರ್ನಮೆಂಟು ಮ್ಯೂಜಿಯಮ್ಮಿನಲ್ಲಿ ಅನೇಕ ತಾಂಬ್ರದ ಶಾಸನಗಳನ್ನು ಬಹಿರಂಗವಾಗಿ ಪ್ರದರ್ಶಿಸುತ್ತಿರುವರು. 15 ದಿನಗಳವರೆಗೂ ಹೀಗೆ ಪ್ರದರ್ಶಿಸಲು ಉದ್ದೇಶಿಸಿರುವರು.

ವಿಮಾನ ಪ್ರವಾಸ

ಶ್ರೀ ಪೂರೀ ಶಂಕರಾಚಾರ್ಯರು ಬೊಂಬಾಯಿಯ ಧರ್ಮನಗರದ ಮಹಾ ಚಂಡಿ ಯಜ್ಞಕ್ಕೆ ವಿಮಾನದಲ್ಲಿ ಪ್ರಯಾಣಬೆಳೆಸಿದರು.

ಗಾಂಧೀಜಿ ಶಾಂತಿ ಯಾತ್ರೆಯ ಚಲನ ಚಿತ್ರ

ಮಹಾತ್ಮಾಜೀಯವರು ನೌಖಾಲಿ ಗ್ರಾಮಗಳಲ್ಲಿ ಕೈಗೊಂಡ ಮಹತ್ವಪೂರ್ಣ ಕಾಲ್ನಡಿಗೆಯು ಸಂಚಾರವು ಕರಿತು ಇಂಪರ್ಮೇಷನ್ ಇಲಾಖೆಯು ಕಡೆಯಿಂದ ಡಲಚಿತ್ರವೆತ್ತುವ ಏರ್ಪಾಡು ಮಾಡಿದರೆ ಇದರಿಂದ ಜಾತೀಯ ಐಕ್ಯತೆಗೆ ಮತ್ತು ಪ್ರೇಮ ಸಂದೇಶದ ಪ್ರಚಾರಕ್ಕೆ ತುಂಬಾ ಸಹಾಯವಾದೀತು ಎಂಬದಾಗಿ ಬನಾರಸ್ ಗಾಂಧೀ ಸಂಘದ ಅಧ್ಯಕ್ಷ ಶ್ರೀ ಎಂ. ಎಸ್. ಸುಂದರಂ ರವರು ಸರದಾರ್ ಪಟೇಲರೊಡನೆ ತಂತೀ ಮುಖೇನ ಬಿನ್ನವಿಸಿಕೊಂಡಿದ್ದಾರೆ.

ಮುಸ್ಲಿಂ ಮಹಿಳೆಯರೊಂದಿಗೆ ಗಾಂಧೀಜಿಯವರ ಭಾವ ಚಿತ್ರ

—o—

ಭಾಟಿಯಾಲವುರನೆಂಬ ನೌಖಾಲಿಯ ಗ್ರಾಮಕ್ಕೆ ಗಾಂಧೀಜಿ ಸಂದರ್ಶಿಸುತ್ತಾಗ ಅಲ್ಲಿಯ ಒಂದು ಮುಸ್ಲೀಮ್ ವಸತಿಯನ್ನು ಸಂದರ್ಶಿಸಿದರು. ಆ ಮನೆಯ ಮಹಿಳೆಯರು ಗಾಂಧೀಜಿಯವರ ದರ್ಶನ ಪಡೆಯಲು ಇಚ್ಛಿಸಿದರು. ಆವರು ಪರದಾ ಕ್ರಮ ಅನುಸರಿಸುತ್ತಿದ್ದ ದರಿಂದ ಗಾಂಧೀಜಿಯನ್ನು ಮನೆಯ ಹಿಂದಿನ ವಠಾರಕ್ಕೆ ಕರೆಸಿದರು. ಅಲ್ಲಿ ಅವರು ಗಾಂಧೀಜಿಯೊಡನೆ ನಿಂತು ಭಾವ ಚಿತ್ರ ತೆಗೆಯಲಪೇಕ್ಷಿಸಿದರು. ಕೂಡಲೇ ಓರ್ವ ಫೊಟೋ ಗ್ರಾಫರನ್ನು ಕರೆಸಲಾಯಿತು. ಮುಸ್ಲೀಮ್ ಮಹಿಳೆಯರೊಂದಿಗೆ ಗಾಂಧೀಜಿ ನಿಂತು ಒಂದು ಭಾವ ಚಿತ್ರವನ್ನೆತ್ತಲಾಯಿತು.

ತಾತ್ಕಾಲಿಕ ಸರಕಾರ

ನವದೆಹಲಿಯಲ್ಲಿ ತಾ|| 21 ರಲ್ಲಿ ತಾತ್ಕಾಲಿಕ ಮಂತ್ರಿಮಂಡಲ ಸಭೆಯು ನಡೆಯಿತು. ವೈಸರಾಯರು ಅಧ್ಯಕ್ಷತೆ ವಹಿಸಿದ್ದರು.

(೨ ನೇ ಪುಟದಿಂದ)

ಭಾಷಣ ಮಾಡಿದರು, ಕೆಲವು ಅಗತ್ಯ ನಿರ್ಣಯಗಳು ಮಂಜೂರಾದ ನಂತರ ಶ್ರೀ ದ್ವಾರಕಾ ಶಂಕರಾಚಾರ್ಯ ಮಹಾರಾಜರವರೂ, ಶ್ರೀ ಕರಪಾತ್ರಿ ಮಹಾರಾಜರವರೂ ಆಶೀರ್ವಚನ ಪೂರ್ವಕವಾದ ಭಾಷಣಗಳನ್ನು ಮಾಡಿದ ನಂತರ ಸಮ್ಮೇಳನವು ಮುಕ್ತಾಯಗೊಂಡಿತು.

ರಾಜ್ಯಾಂಗ ಸಮ್ಮೇಳನ ನಡೆದ ನಂತರ ಧರ್ಮಸಂಘದ ಅಧಿವೇಶನ ಪ್ರಾರಂಭವಾಯಿತು. ಭಾರತದ ಅನೇಕ ಕಡೆಗಳಿಂದ ಬಂದಿರುವ ನಾಯಕರು ವೀರಾವೇಶ ಭಾಷಣ ಮಾಡಿದರು, ಕೆಲ ಮುಖ್ಯ ತೀರಾವುಗಳು ಮಂಜೂರಾದವು

(ತ್ರಿ) [ನಾಳೆ ಸಂಚಿಕೆ ನೋಡಿ

ಸ್ಮಟ್ಸ್‌ರ ಧಿಟ್ಟತನ

ಕೇಪ್‌ಟೌನ್ ಜ 21 — ಏಷ್ಯಾಟಿಕ್ ಲ್ಯಾಂಡ್ ಟೆನ್ಯೂರು ಮಸೂದೆಯು ಹಾಗೇ ಇರುವುದೆಂದೂ ವಿಶ್ವ ಸಂಸ್ಥೆಯು ಮಾತಿನಂತೆ ನಡೆಯುವುದಿಲ್ಲವೆಂದು ಜ|| ಸ್ಮಟ್ಸರು ಅಸೆಂಬ್ಲಿಯಲ್ಲಿ ತಿಳಿಸಿದರು.

ಆತ್ಮಹತ್ಯ

ಮದರಾಸು ಜ 27 — ಮೆಲಾಪುರದ ದೇವಾಲಯ ಕೊಳದಲ್ಲಿ ಅನಂತಪುರದ ಸಬಾರ್ಡಿನೇಟ್ ಜಡ್ಜರು ಶ್ರೀ ರಂಗರಾಮರು ಮುಳಗಿಸತ್ತರು. ಇವರ ಮೇಲೆ ಇಲಾಖಾ ತನಿಖೆ ಕ್ರಮ ನಡೆಯುತ್ತಿತ್ತು.

ಅಡಿಗೆಯವರಿಗೆ ರೂ ೩೦ ಸಂಬಳ

ಕುಂಭಕೋಣ — ಸೋಮವಾರ ಇಲ್ಲಿ ಪ್ರಾಂತೀಯ ವೈಷ್ಣವ ಬ್ರಾಹ್ಮಣ ಅಡಿಗೆಯವರ ಸಮ್ಮೇಳನ ನಡೆಯಿತು. ಪ್ರಾಂತ್ಯದಲ್ಲಿ ಮನೆಗಳಲ್ಲಿಯೂ ದೇವಸ್ಥಾನಗಳಲ್ಲಿಯೂ 5000 ಅಡಿಗೆಯವರಿರುವರೆಂದು ಎಲ್ಲರೂ ಐಕ್ಯತೆಯಿಂದ ವರ್ತಿಸಬೇಕೆಂದು ಅಧ್ಯಕ್ಷರು ಹೇಳಿದರು. 30 ರೂ- ಗಳಿಗೆ ಕಡಿಮೆ ಇಲ್ಲದೆ ಸಂಬಳ ಕೊಡಬೇಕೆಂಬ ಠರಾವು ಮಂಜೂರಾಯಿತು.

ರಷ್ಯಾ ಜನ ಸಂಖ್ಯೆ

ಯುದ್ಧ ವರ್ಷಗಳಲ್ಲಿಗಿಂತ ಎರಡರಷ್ಟಾಗುತ್ತಿದೆ ರಷ್ಯಾ ಜನ ಸಂಖ್ಯೆ.

ಮೈಸೂರಿಗೆ ಅಕ್ಕಿ, ಗೋಧಿ

ಮೈಸೂರು ಸಂಸ್ಥಾನಕ್ಕೆ ಭಾರತ ಸರಕಾರವು ಜನವರಿ ಫೆಬ್ರವರಿ ಮಾರ್ಚಿ ತಿಂಗಳಿಗೆ 13 ಸಾವಿರ ಟನ್ ಗೋಧಿ ಮತ್ತು ಅಕ್ಕಿ ಸರಬರಾಜು ಮಾಡುವ ವ್ಯವಸ್ಥೆ ಆಗಿದೆ.

ರಾ. ರ. ಸಭೆ

ಡೆಲ್ಲಿಯ ರಾಜ್ಯಾಂಗ ರಚನಾ ಸಭೆಯಲ್ಲಿ ಪಂ|| ನೆಹರೂರವರು ತಂದಿದ್ದ ಸಭೆಯ ಗುರಿಯ ಸಂಬಂಧದ ಠರಾವು ಸರ್ವಾನುಮತದಿಂದ ಮಂಜೂರಾಯಿತು. ರಾಜ್ಯಾಂಗ ಸಭೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆಯೂ ಸಭೆಯು ಸದಸ್ಯ ಕೆಲಸಗಾರರ ಸಂಬಳ ತಗ್ಗಿಸುವು ನಿರ್ಣಯ ಬರಲಿರುವುದು.

ಸುಧಾರಣಾಧಿಕಾರಿಗಳು

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ದಯಪಾಲಿಸಿರುವ ಸಂದೇಶದಲ್ಲಿ ತಿಳಿಯಪಡಿಸಿರುವ ರಾಜ್ಯಾಂಗ ಸುಧಾರಣೆ ಸಂಬಂಧದಲ್ಲಿ ದಿವಾನರಿಗೆ ಸಲಹೆ ಕೊಡಲು ಶ್ರೀ ಬಿ. ಎಸ್. ಪುಟ್ಟಸ್ವಾಮಿಯರು ಸುಧಾರಣಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುವರು.

.....

ಕಲ್ಕತ್ತಾ ಜ 22 — ವಿಯಟ್ ನಾಂ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ದುಂಡಾವರ್ತಿ ನಡೆಸಿದರೆಂದು ಪೋಲೀಸರು ಗುಂಡು ಹಾರಿಸಿದರು.

ಅಖಿಲ ಭಾರತ ಧರ್ಮ ಸಂಘ

(ಸ್ವಂ. ಸು. ತಂತಿ)

ಬೊಂಬಾಯಿ ಜ 21 — ಅಖಿಲ ಭಾರತ ಧರ್ಮ ಸಂಘದ 6 ನೇ ಅಧಿವೇಶನವು ಶನಿವಾರ ಇಲ್ಲಿ ನಿರ್ಮಿಸಲಾಗಿರುವ ಧರ್ಮ ನಗರದ ಭಾರಿ ಚಪ್ಪರದಲ್ಲಿ ಪ್ರಾರಂಭವಾಯಿತು. ದ್ವಾರಕಾ ಶಾರದಾ ಪೀಠದ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಜಗದ್ಗುರು ಶಂಕರಾಚಾರ್ಯಸ್ವಾಮಿಗಳೂ ಮತ್ತು ಅನೇಕ ಹಿಂದೂ ಮತೀಯ ಮುಖಂಡರೂ ಸಭೆಯನ್ನು ಅಲಂಕರಿಸಿದ್ದರು. ಜೋತಿರ್ಪೀಠದ ಶಂಕರಾಚಾರ್ಯರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಹೊಸ ಅಧ್ಯಕ್ಷರಿಗೆ ನಿವೃತ್ತ ಅಧ್ಯಕ್ಷರಾದ ಶ್ರೀ ದ್ವಾರಕಾ ಜಗದ್ಗುರುಗಳವರು ಅಧ್ಯಕ್ಷಾಧಿಕಾರವನ್ನು ವಹಿಸಿಕೊಟ್ಟರು ಇಬ್ಬರು ಅಧ್ಯಕ್ಷರ ಭಾಷಣಾನಂತರ ಶ್ರೀ ಈದಪಾತ್ರಿ ಸ್ವಾಮಿಗಳು ಸ್ಫೂರ್ತಿದಾಯಕ ಭಾಷಣ ಮಾಡಿದರು. ಭಾನುವಾರ ಸಂಜೆ ಸಭೆ ಮತ್ತು ನಡೆದು ಹಲವು ಪ್ರಮುಖ ಠರಾವುಗಳು ಮಂಜೂರಾದವು ಹಲವು ವಿದ್ವಾಂಸರು ಮಾತನಾಡಿದರು.

ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರರ ಮತ್ತು ಶ್ರೀ ಕರಪಾತ್ರಿ ಮಹಾರಾಜರವರ ಆಶೀರ್ವಾದ ಪೂರ್ವಕವಾದ ಭಾಷಣನಂತರ ಅಧಿವೇಶನವು ಪರಿಸಮಾಪ್ತಿಗೊಂಡಿತು.

ರಾಜ್ಯಾಂಗ ಸಮ್ಮೇಳನವು ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರುಳಿವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಸಂಗೀತ ಚಾರ್ಯ ಮಾಸ್ಟರ್ ವಸಂತರವರಿಂದ ವಂದೇ ಮಾತರಂ ಗೀತೆಯು ಹಾಡಲ್ಪಟ್ಟಿತು. ಅಧ್ಯಕ್ಷರು ದೀರ್ಘವಾದ ಭಾಷಣದಲ್ಲಿ ತಾತ್ಕಾಲಿಕ ರಾಜ್ಯಾಡಳಿತದಲ್ಲಿ ಸನಾತನ ಪ್ರಪಂಚದ ಸ್ಥಿತಿಗತಿಗಳನ್ನು ವಿವರಿಸಿ ರಾಜ್ಯಾಂಗದಲ್ಲಿ ಸನಾತನ ಪ್ರಾತಿನಿಧ್ಯ ವಿರುವ ಅವಶ್ಯಕತೆಯನ್ನು ತಿಳಿಸಿದರು. ಪ್ರೊ॥ ದೂರ್ಕಾಲರು ಹೃದಯಂಗವ:

[1 ನೇ ಪುಟ ನೋಡಿ]

— ರಾಜ್‌ಕಮಲ್ ಮೈಸೂರು —

22-1-47 ನೇ ಬುಧವಾರದಿಂದ ಆಮೋಘ ಪ್ರಾರಂಭ

ಪ್ರತಿಜ್ಞಾ

(ಪ್ರತಿದಿನ ಮೂರು ಆಟಗಳು] (ಹಿಂದಿ

ಭೂಮಿಕೆ — * ಮೋತಿಲಾಲ್ * ಸ್ವರ್ಣಲತ * ಬೇಬಿ ಮಿನಾ
* ನಾಗೇಂದ್ರ * ವೀಣಕುಮಾರಿ * ಸುನೇತ್ರ
* ಬೂಡೋ ಆದ್ವಾನಿ * ಮಜೀದ್, ಮುಂತಾದವರು

ಸಿ. ಬಿ. ಎ. ಚಂದ್ರಯ್ಯ (ಮೈಸೂರು) ರಿಲೀಸ್

Vijaya Agencies, Mysore

At Ranjit_____ From 17–1–47

BANSARI

ಹಾಸ್ಯನಟ ಚಾರ್ಲಿ, ಈಶ್ವರ್‌ಲಾಲ್, ಪನಿಯಾಂ, ದೀಕ್ಷಿತ್, ಕೇಸರಿ ಪಾತ್ರವಹಿಸಿರುವ

ಬನ್ನರಿ (ಹಿಂದಿ)

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನು ಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ಕರಸ್ತೆ, ಜಿ. ಟಿ. ಮದರಾಸು.

At Opera ☰ 2nd Glorious Week

ಪೊನ್ನರುವಿ

From 24–I–47

JUNGLE GODESS

Edited, Printed and Published by M. S Krishna Rao at the Satyavadi Press ChamarajAgrahar, Mysore.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ೧
ಸೋಮವಾರದ ಸಂ
ವಾರ್ಷಿಕಚಂದ
ಪರಸ್ಥಳಕ್ಕೆ ಅಂಚೆವೆಚ್ಚ